**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ03.06.2026**

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ:**

3 ಲಕ್ಷಕ್ಕೆ ಮನೆ ಭೋಗ್ಯ ಕರಾರು ಮಾಡಿಕೊಂಡಿರುವುದಾಗಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಸದರಿ ಕರಾರಿಗೆ ನಾನು ಸಹಿ ಮಾಡಿಲ್ಲ. ಸದರಿ ಕರಾರನ್ನು ಮಾಡಿಕೊಂಡಿರುವ ದಿನಾಂಕ ನನಗೆ ನೆನಪಿಲ್ಲ. 4 ಲಕ್ಷ ರೂಪಾಯಿ ಚೆಕ್ ನೀಡಿರುವುದಾಗಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಸದರಿ ಚೆಕ್ ಯಾವ ಬ್ಯಾಂಕ್ ಗೆ ಸೇರಿದ್ದೆಂದು ನನಗೆ ಗೊತ್ತಿಲ್ಲ. ಭೋಗ್ಯ ಯಾವ ವರ್ಷಕ್ಕೆ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದೂರುದಾರರ ಮನೆಯಲ್ಲಿ ಆರೋಪಿಯು ಬಾಡಿಗೆಗೆ ಇದ್ದ ಸಮಯದಲ್ಲಿ ನಾನು ಖುದ್ದಾಗಿ ಮನೆಗೆ ಭೇಟಿ ನೀಡಿರುತ್ತೇನೆ. ನಾನು ದೂರುದಾರರ ಮನೆ ನೋಡಿರುತ್ತೇನೆ. ಅದರ ವಿಸ್ತೀರ್ಣ ಮತ್ತು ಅದು ಎಷ್ಟು ಮಹಡಿಯ ಮನೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಯಾವ ವರ್ಷ ಮತ್ತು ಯಾವ ದಿನಾಂಕದಂದು ದೂರುದಾರರು ಚೆಕ್ ಕಳೆದುಹೋಗಿರುವುದಾಗಿ ನಮಗೆ ತಿಳಿಸಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ದೂರುದಾರರು 1ನೇ ಮಹಡಿಯಲ್ಲಿ ವಾಸವಾಗಿರುತ್ತಾರೆ. ಆರೋಪಿಯನ್ನು ಕರೆದುಕೊಂಡು ಹೋಗಿ ದೂರುದಾರರ ಮನೆಯಲ್ಲಿ ಯಾವತ್ತು ನಾನಾಗಲೀ ಗೋಪಿನಾಥ್, ಪರ್ವತಯ್ಯ, ಸುರೇಶ ರವರಾಗಲೀ ಚೆಕ್ ಬಗ್ಗೆ ವಿಚಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ದೂರುದಾರರಿಗೆ ಕರಾರು ಸಂಬಂಧವಾಗಿ ಯಾವುದೇ ಚೆಕ್ ನ್ನು ನೀಡಿಲ್ಲದಿದ್ದರೂ ಸಹ ಆರೋಪಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಈ ಪ್ರಕರಣದಲ್ಲಿ ಅನುಕೂಲವಾಗಲೀ ಎಂದು ನನ್ನನ್ನು ಕರೆಸಿ ಸುಳ್ಳು ಸಾಕ್ಷಿ ನುಡಿಸುತ್ತಿದ್ದಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ